## ಗೆದ್ದವರು, ಗೆಲುವಿಗೆ ಹತ್ತಿರ ಸುಳಿದವರು

| ಇಸವಿ | ಸ್ಥಳ | ಚಾಂಪಿಯನ್ | ರನ್ನರ್ ಅಪ್ | ಮೂರನೇ ಸ್ಥಾನ |
|---|---|---|---|---|
| 1971 | ಬಾರ್ಸಲೋನಾ, ಸ್ಪೇನ್ | ಪಾಕಿಸ್ತಾನ | ಸ್ಪೇನ್ | ಭಾರತ |
| 1973 | ಆ್ಯಮ್‌ಸ್ಟೆಲ್ವೀನ್, ನೆದರ್‌ಲ್ಯಾಂಡ್ಸ್ | ನೆದರ್‌ಲ್ಯಾಂಡ್ಸ್ | ಭಾರತ | ಪಶ್ಚಿಮ ಜರ್ಮನಿ |
| 1975 | ಕ್ವಾಲಾಲಂಪುರ್, ಮಲೇಷ್ಯಾ | ಭಾರತ | ಪಾಕಿಸ್ತಾನ | ಪಶ್ಚಿಮ ಜರ್ಮನಿ |
| 1978 | ಬ್ಯೂನಸ್ ಐರಿಸ್, ಅರ್ಜೆಂಟಿನಾ | ಪಾಕಿಸ್ತಾನ | ನೆದರ್‌ಲ್ಯಾಂಡ್ಸ್ | ಆಸ್ಟ್ರೇಲಿಯಾ |
| 1982 | ಬಾಂಬೆ, ಭಾರತ | ಪಾಕಿಸ್ತಾನ | ಪಶ್ಚಿಮ ಜರ್ಮನಿ | ಆಸ್ಟ್ರೇಲಿಯಾ |
| 1986 | ಲಂಡನ್, ಇಂಗ್ಲೆಂಡ್ | ಆಸ್ಟ್ರೇಲಿಯಾ | ಇಂಗ್ಲೆಂಡ್ | ಪಶ್ಚಿಮ ಜರ್ಮನಿ |
| 1990 | ಲಾಹೋರ್, ಪಾಕಿಸ್ತಾನ | ನೆದರ್‌ಲ್ಯಾಂಡ್ಸ್ | ಪಾಕಿಸ್ತಾನ | ಆಸ್ಟ್ರೇಲಿಯಾ |
| 1994 | ಸಿಡ್ನಿ, ಆಸ್ಟ್ರೇಲಿಯಾ | ಪಾಕಿಸ್ತಾನ | ನೆದರ್‌ಲ್ಯಾಂಡ್ಸ್ | ಆಸ್ಟ್ರೇಲಿಯಾ |
| 1998 | ಉಟ್ರೆಕ್ಟ್, ನೆದರ್‌ಲ್ಯಾಂಡ್ಸ್ | ನೆದರ್‌ಲ್ಯಾಂಡ್ಸ್ | ಸ್ಪೇನ್ | ಜರ್ಮನಿ |
| 2002 | ಕ್ವಾಲಾಲಂಪುರ್, ಮಲೇಷ್ಯಾ | ಜರ್ಮನಿ | ಆಸ್ಟ್ರೇಲಿಯಾ | ನೆದರ್‌ಲ್ಯಾಂಡ್ಸ್ |
| 2006 | ಮಾಂಚೆಂಗ್ಲಾಡ್‌ಬ್ಯಾಚ್, ಜರ್ಮನಿ | ಜರ್ಮನಿ | ಆಸ್ಟ್ರೇಲಿಯಾ | ಸ್ಪೇನ್ |
| 2010 | ನವದೆಹಲಿ, ಭಾರತ | ಆಸ್ಟ್ರೇಲಿಯಾ | ಜರ್ಮನಿ | ನೆದರ್‌ಲ್ಯಾಂಡ್ಸ್ |
| 2014 | ದಿ ಹೇಗ್, ನೆದರ್‌ಲ್ಯಾಂಡ್ಸ್ | ಆಸ್ಟ್ರೇಲಿಯಾ | ನೆದರ್‌ಲ್ಯಾಂಡ್ಸ್ | ಅರ್ಜೆಂಟಿನಾ |

ಇಪ್ಪತ್ತನಾಲ್ಕು ತಂಡಗಳು ಇದುವರೆಗೆ ವಿಶ್ವಕಪ್ ಆಡಲು ಅರ್ಹತೆ ಗಳಿಸಿವೆ. ಈ ಪೈಕಿ 11 ತಂಡಗಳು ಬೇರೆ ಬೇರೆ ಪಂದ್ಯಾವಳಿಗಳಲ್ಲಿ ಸೆಮಿಫೈನಲ್‌ವರೆಗೆ ಪ್ರವೇಶಿಸಲು ಶಕ್ಯವಾಗಿವೆ. ಏಳು ತಂಡಗಳು ಫೈನಲ್ಸ್‌ವರೆಗೆ ಸಾಗಿವೆ. ಪಾಕಿಸ್ತಾನ ಆರು ಸಲ ಅಂತಿಮ ಘಟ್ಟ ಪ್ರವೇಶಿಸಿ, ನಾಲ್ಕು ಸಲ ಪ್ರಶಸ್ತಿ ಗೆದ್ದು ಅತಿ ಯಶಸ್ವಿ ತಂಡ ಎನಿಸಿಕೊಂಡಿದೆ. ನೆದರ್‌ಲ್ಯಾಂಡ್ಸ್ ಕೂಡ ಪಾಕ್‌ನಷ್ಟೇ ಸಲ ಫೈನಲ್ಸ್ ಆಡಿದ್ದು, ಮೂರು ಸಲ ಪ್ರಶಸ್ತಿ ಎತ್ತಿಹಿಡಿದಿದೆ. ಸತತವಾಗಿ ಕಳೆದ ಎರಡು ಸಲ ಪ್ರಶಸ್ತಿ ಗೆದ್ದಿರುವ ಆಸ್ಟ್ರೇಲಿಯಾ ಸದ್ಯದ ಬಲಿಷ್ಠ ತಂಡಗಳಲ್ಲಿ ಒಂದು.

## ಈ ಸಲ ಹೀಗಿದೆ ಆಟ...

ಭುವನೇಶ್ವರದಲ್ಲಿ ನಡೆಯಲಿರುವ 14ನೇ ವಿಶ್ವಕಪ್ ಹಾಕಿಯಲ್ಲಿ ನಾಲ್ಕು ಪೂಲ್‌ಗಳಿವೆ. ಭಾರತ ಆಡಲಿರುವುದು ಪೂಲ್ 'ಸಿ'ಯಲ್ಲಿ. ಪ್ರತಿ ಪೂಲ್‌ನಲ್ಲಿ ನಾಲ್ಕು ತಂಡಗಳು. ಮೊದಲ ಸ್ಥಾನ ಪಡೆಯುವ ನಾಲ್ಕು ತಂಡಗಳು ನೇರವಾಗಿ ಕ್ವಾರ್ಟರ್‌ಫೈನಲ್ಸ್ ಪ್ರವೇಶಿಸಲಿವೆ. ಎರಡನೇ ಹಾಗೂ ಮೂರನೇ ಸ್ಥಾನ ಪಡೆಯುವ ತಂಡಗಳು 'ಪ್ಲೇ ಆಫ್' ಹಂತಕ್ಕೆ ಕಾಲಿಡಲಿವೆ. 'ಪೂಲ್'ನಲ್ಲಿ ಕೊನೆಯದಾಗುವ ತಂಡ ವಿಶ್ವಕಪ್‌ನಿಂದ ಹೊರಕ್ಕೆ.

**ಪೂಲ್ 'ಎ':** ಅರ್ಜೆಂಟಿನಾ, ಸ್ಪೇನ್, ನ್ಯೂಜಿಲೆಂಡ್, ಫ್ರಾನ್ಸ್. ಒಲಿಂಪಿಕ್ ಚಾಂಪಿಯನ್ಸ್ ಅರ್ಜೆಂಟಿನಾ ಬಹುತೇಕರ ಫೇವರಿಟ್. ಚಾಂಪಿಯನ್ಸ್ ಟ್ರೋಫಿಯಲ್ಲಿ ನಾಲ್ಕನೇ ಸ್ಥಾನಕ್ಕೆ ಕುಸಿದರೂ ಅದರ ಮೇಲೆ ನಂಬಿಕೆ ಇಟ್ಟವರ ಸಂಖ್ಯೆ ದೊಡ್ಡದು. ಸ್ಪೇನ್ ಹಾಗೂ ನ್ಯೂಜಿಲೆಂಡ್ ನಂತರದ ಸ್ಥಾನಗಳನ್ನು ಪಡೆಯಲಿವೆ ಎನ್ನುವುದು ಲೆಕ್ಕಾಚಾರ.

**ಪೂಲ್ 'ಬಿ':** ಆಸ್ಟ್ರೇಲಿಯಾ, ಇಂಗ್ಲೆಂಡ್, ಐರ್ಲೆಂಡ್, ಚೀನಾ. ಕಳೆದ ವಿಶ್ವಕಪ್ ಚಾಂಪಿಯನ್ಸ್ ಆಸ್ಟ್ರೇಲಿಯಾ ಮೇಲೆ ಎಲ್ಲರ ಕಣ್ಣು. ಇಂಗ್ಲೆಂಡ್ ಹಾಗೂ ಐರ್ಲೆಂಡ್ ನಂತರದ ಪ್ರಬಲ ತಂಡಗಳಾಗಿದ್ದು, ಚೀನಾದವರು ಐರ್ಲೆಂಡ್‌ಗೆ ಶಾಕ್ ಕೊಡಬಲ್ಲ ಸಾಮರ್ಥ್ಯ ಹೊಂದಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ.

**ಪೂಲ್ 'ಸಿ':** ಬೆಲ್ಜಿಯಂ, ಭಾರತ, ಕೆನಡಾ, ದಕ್ಷಿಣ ಆಫ್ರಿಕಾ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದ ಬೆಲ್ಜಿಯಂ ಹಾಗೂ ಆತಿಥೇಯ ಭಾರತದ ಆಟ ಹೇಗಿದ್ದೀತು ಎನ್ನುವುದು ನಿರೀಕ್ಷೆ. ಚಾಂಪಿಯನ್ಸ್ ಟ್ರೋಫಿಯಲ್ಲಿ ರನ್ನರ್ ಅಪ್ ಆಗಿರುವುದು ಭಾರತದ ಆತ್ಮಬಲ ಹೆಚ್ಚುಮಾಡಿದೆ. ಕೆನಡಾ ಕೂಡ ಪ್ರತಿಭಾವಂತ ತಂಡವೇ ಹೌದು. ದಕ್ಷಿಣ ಆಫ್ರಿಕಾ ಹೊಸ ಛಾಪು ಮೂಡಿಸಲು ಹೆಚ್ಚೇ ಬೆವರು ಬಸಿಯಬೇಕು.

**ಪೂಲ್ 'ಡಿ':** ಪಾಕಿಸ್ತಾನ, ನೆದರ್‌ಲ್ಯಾಂಡ್ಸ್, ಜರ್ಮನಿ, ಮಲೇಷ್ಯಾ. ಪಾಕ್ ನಾಲ್ಕು ಸಲ, ನೆದರ್‌ಲ್ಯಾಂಡ್ಸ್ ಮೂರು ಸಲ, ಜರ್ಮನಿ ಎರಡು ಸಲ ವಿಶ್ವಕಪ್ ಗೆದ್ದಿರುವುದರಿಂದ ಇದು ಹೆಚ್ಚು ಸ್ಪರ್ಧೆ ಕಾಣಲಿರುವ 'ಪೂಲ್' ಎನಿಸಿಕೊಂಡಿದೆ. ಇತ್ತೀಚಿನ ಫಾರ್ಮ್ ನೋಡಿದರೆ, ನೆದರ್‌ಲ್ಯಾಂಡ್ ಅಥವಾ ಜರ್ಮನಿ ಮೇಲುಗೈ ಸಾಧಿಸುವ ಲಕ್ಷಣವಿದೆ ಎನ್ನುವವರೇ ಹೆಚ್ಚು. ಹಾಗೆಂದು ಪಾಕ್, ಮಲೇಷ್ಯಾ ಆಟದ ವೈಖರಿಯನ್ನು ಲಘುವಾಗಿ ಪರಿಗಣಿಸಲಾಗದು.


